ಓ ಎಸ್ ನಂ.10/2025

ಪಿ.ಡಬ್ಲ್ಯೂ-1 ಹುಸೇನಸಾಬ ತಂದೆ ಖಾಸಿಂಸಾಬ ಆವೇರಿ ಯಾನೆ ಮಡನಳ್ಳಿ

**(ಇಂದು ದಿನಾಂಕಃ 17-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟಿ ಸವಾಲು: ಶ್ರೀ ಎಸ್ ಜಿ ಹೆಚ್ ವಕೀಲರಿಂದ.

ದಾವಾ ಜಮೀನಿನ ಸರ್ವೆ ನಂಬರ ೩೫೭ ಇದ್ದು, ಅದು ೧೪ ಎಕರೆ ೫ ಗುಂಟೆ ಜಮೀನು ಇರುತ್ತದೆ. ದಾವಾ ಜಮೀನಿನ ಚೆಕ್ಕುಬಂದಿ ನನಗೆ ಹೇಳಲು ಗೊತ್ತು. ಪೂರ್ವಕ್ಕೆ ಕುಲಭೂಷಣರವರ ಜಮೀನು, ಪಶ್ಚಿಮಕ್ಕೆ ಬಸಣ್ಣರವರ ಜಮೀನು, ಉತ್ತರಕ್ಕೆ ನಮ್ಮದೆ ಸರ್ವೆ ನಂಬರ ೩೪೫ ರ ಜಮೀನು ಮತ್ತು ದಕ್ಷಿಣಕ್ಕೆ ಸರ್ವೆ ನಂಬರ ೩೫೯ ನಮ್ಮದೆ ಜಮೀನು ಇರುತ್ತದೆ. ನಾನು ಸದರಿ ಚೆಕ್ಕುಬಂದಿಗಳನ್ನು ದಾವೆಯಲ್ಲಿ ಬರೆಸಿರುವುದಿಲ್ಲ.

೨. ದಾವಾ ಜಮೀನು ಮೊದಲು ಇಮ್ಮಣ್ಣ ಆವೇರಿರವರಿಗೆ ಸೇರಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ದೊಡ್ಡಪ್ಪನಾದ ಇಮಾಮಸಾಬರವರ ಹೆಸರಿನಲ್ಲಿತ್ತು, ಅದು ನಂತರ ನಮ್ಮ ಹೆಸರಿನಲ್ಲಿ ಆಗಿರುತ್ತದೆ. ಇಮ್ಮಣ್ಣರವರಿಗೆ ಕೇವಲ ಉಣ್ಣಲು ಜಮೀನು ನೀಡಲಾಗಿತ್ತು ಎನ್ನುತ್ತಾರೆ. ಇಮ್ಮಣ್ಣರವರ ಮಗನಾದ ಹಸನಸಾಬರವರ ಹೆಸರಿನಲ್ಲಿ ದಾವಾ ಜಮೀನು ಇತ್ತು ಎಂದರೆ ಸರಿಯಲ್ಲ. ಹಸನಸಾಬರವರಿಗೆ ಮಕ್ಕಳು ಇಲ್ಲ ಎಂದರೆ ಸರಿ. ಪ್ರತಿವಾದಿ ಫಾತೀಮಾರವರು ಹಸನಸಾಬರವರ ತಮ್ಮನ ಮಗಳು ಎಂದರೆ ನನಗೆ ಗೊತ್ತಿಲ್ಲ. ಹಸನಸಾಬರವರ ತಮ್ಮನ ಹೆಸರು ಅಲ್ಲಾವುದ್ದೀನ್ ಎಂದರೆ ನನಗೆ ಗೊತ್ತಿಲ್ಲ. ಹಸನಸಾಬರವರು ದಾನಪತ್ರದ ಮೂಲಕ ಪ್ರತಿವಾದಿಗೆ ದಾವಾ ಜಮೀನು ನೀಡಿರುತ್ತಾರೆ ಎಂದರೆ ಸರಿಯಲ್ಲ.

೩. ನಮ್ಮ ದೊಡ್ಡಪ್ಪನ ಹೆಸರಿನಲ್ಲಿ ದಾವಾ ಜಮೀನು ಇದ್ದ ಕುರಿತು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ದೊಡ್ಡಪ್ಪನಿಂದ ನನ್ನ ಹೆಸರಿನಲ್ಲಿ ದಾವಾ ಜಮೀನು ಆದ ಕುರಿತು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಶಾಲೆ ಕಲಿತಿಲ್ಲ. ನಾನು ಹಾಜರುಪಡಿಸಿದ ದಾವಾ ಆಸ್ತಿಯ ಪಹಣಿಯಲ್ಲಿ ಪ್ರತಿವಾದಿಯ ಹೆಸರು ಇರುತ್ತದೆ ಎಂದರೆ ಸರಿ. ನನ್ನ ಹೆಸರಿನಲ್ಲಿ ದಾವಾ ಆಸ್ತಿ ಇದ್ದ ಕುರಿತು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೆ ದಾಖಲೆ ಹಾಜರುಪಡಿಸದೆ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮೊದಲು ಹಸನ ತಂದೆ ಇಮಾಮ ಆವೇರಿರವರ ಹೆಸರಿನಲ್ಲಿ ಇದ್ದ ಕುರಿತು ನಾನು ದಾಖಲೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

೪. ಪ್ರತಿವಾದಿಯ ಹೆಸರಿನಲ್ಲಿ ದಾವಾ ಆಸ್ತಿ ಇರುವ ದಾಖಲೆಗಳನ್ನೆ ನಾನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ೨೦೦೩ ರಿಂದ ೨೦೨೨ ರವರೆಗೆ ಪ್ರತಿವಾದಿಯ ಹೆಸರಿನಲ್ಲಿರುವ ಪಹಣಿಗಳನ್ನು ನಾನು ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿಯು ಅವರು ದುಡ್ಡು ಕೊಟ್ಟು ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ದಾವಾ ಆಸ್ತಿ ನನ್ನ ಹೆಸರಿನಲ್ಲಿ ಮತ್ತು ನಮ್ಮ ಹಿರಿಯರ ಹೆಸರಿನಲ್ಲಿ ಯಾವತ್ತು ಇರಲಿಲ್ಲ ಎಂದರೆ ಸರಿಯಲ್ಲ. ೧೯೮೩ ರಲ್ಲಿ ದಾವಾ ಜಮೀನು ಪ್ರತಿವಾದಿಯ ಹೆಸರಿನಲ್ಲಿ ಮುಟೇಷನ್ ಆಗಿದೆ ಎಂದರೆ ಸಾಕ್ಷಿಯು ಅದಕ್ಕೆ ನಮ್ಮ ಸಹಿ ಇರುವುದಿಲ್ಲ ಎನ್ನುತ್ತಾರೆ. ನಾನು ಈ ಮೊದಲು ಪ್ರತಿವಾದಿ ಹಾಗೂ ಮಾಲನ ಬೀ ಮತ್ತು ಅನೀತಾರವರ ಮೇಲೆ ೧ ದಾವೆ ಹೂಡಿದ್ದೆ ಎಂದರೆ ನನಗೆ ನೆನಪಿಲ್ಲ. ಸದರಿ ದಾವೆ ಓ ಎಸ್ ನಂಬರ ೯೪/೨೦೧೯ ಎಂದು ಇತ್ತು ಎಂದರೆ ನನಗೆ ನೆನಪಿಲ್ಲ. ನಾನು ಸದರಿ ದಾವೆಯಲ್ಲಿ ದಾವಾ ಜಮೀನು ಪ್ರತಿವಾದಿಗೆ ಸೇರಿದ ಕುರಿತು ಬರೆಸಿದ್ದೆ ಎಂದರೆ ನನಗೆ ನೆನಪಿಲ್ಲ.

೫. ಸದರಿ ದಾವೆ ದಾರಿಯ ವಿಚಾರವಾಗಿ ಇತ್ತು ಎಂದರೆ ಸರಿ. ಸದರಿ ದಾವೆ ನನ್ನ ವಿರುದ್ದ ಆಗಿದೆ ಎಂದರೆ ಸರಿ. ಸಾಕ್ಷಿಯು ಅದರಲ್ಲಿ ಕಾಗದ ಪತ್ರ ಇರಲಿಲ್ಲ ಎನ್ನುತ್ತಾರೆ. ಸದರಿ ದಾವೆಯ ಮೇಲೆ ನಾನು ಯಾವುದೆ ಅಪೀಲು ಸಲ್ಲಿಸಿರುವುದಿಲ್ಲ. ಸದರಿ ದಾವೆ ನನ್ನ ವಿರುದ್ದ ಆಗಿದ್ದರಿಂದ ನಾನು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಒಂದು ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ನಾನು ನನ್ನ ಜಮೀನು ನನಗೆ ಬೇಕು ಎಂದು ಹೂಡಿರುತ್ತೇನೆ. ದಾವಾ ಆಸ್ತಿಯು ನನ್ನ ಸ್ವಾಧೀನದಲ್ಲಿರುತ್ತದೆ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಕಿರುವುದಿಲ್ಲ. ಸಾಕ್ಷಿಯು ಸ್ವಾಧೀನದಲ್ಲಿ ನಾನೇ ಇರುತ್ತೇನೆ ಎನ್ನುತ್ತಾರೆ. ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿ ಇರದೆ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ಮತ್ತು ನನಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.